# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 306
ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 11.12.2024
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಚಿಕ್ಕಮಗಳೂರು ಜಿಲ್ಲೆಯಲ್ಲಿ 94 ಸಿ ಹಾಗೂ 94 ಸಿ.ಸಿ ಅಡಿ ಸ್ವೀಕಾರವಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಚಿಕ್ಕಮಗಳೂರು ಜಿಲ್ಲೆಯಲ್ಲಿ 94-ಸಿ ರಡಿ ಒಟ್ಟು 65658 ಹಾಗೂ 94-ಸಿಸಿ ರಡಿ ಒಟ್ಟು 2465 ಅರ್ಜಿಗಳು ಸ್ವೀಕೃತವಾಗಿರುತ್ತವೆ. ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| (ಆ) | ಈ ಪೈಕಿ ಇತ್ಯರ್ಥಪಡಿಸಿ ಹಕ್ಕುಪತ್ರ ನೀಡಿರುವ ಅರ್ಜಿಗಳ ಸಂಖ್ಯೆ ಎಷ್ಟು; ಎಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ; ತಿರಸ್ಕರಿಸಲು ಕಾರಣಗಳೇನು; (ಹೋಬಳಿವಾರು ವಿವರ ಒದಗಿಸುವುದು) | ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವೀಕೃತವಾಗಿದ್ದ ಅರ್ಜಿಗಳ ಪೈಕಿ ಇತ್ಯರ್ಥಪಡಿಸಿ 94-ಸಿ ರಡಿ 20545 ಹಾಗೂ 94-ಸಿಸಿ ರಡಿ 286 ಹಕ್ಕುಪತ್ರಗಳನ್ನು ನೀಡಲಾಗಿದೆ.<br>94-ಸಿ ರಡಿ 33432 ಅರ್ಜಿ ಹಾಗೂ 94-ಸಿಸಿ ರಡಿ 1457 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಹೋಬಳಿವಾರು ವಿವರವನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.<br><br>ಕರ್ನಾಟಕ ಭೂಕಂದಾಯ ಕಾಯ್ದೆ,1964ರ ಕಲಂ 94ಸಿ ಮತ್ತು 94ಸಿಸಿ ರಡಿ ಭೂಮಂಜೂರಾತಿಗಾಗಿ ಅನಧಿಕೃತ ಅಧಿಭೋಗದಾರನು ಈ ಕೆಳಗಿನಂತೆ ಅರ್ಹತೆಯನ್ನು ಹೊಂದಿರತಕ್ಕದ್ದಾಗಿದೆ:-<br>1. ಅರ್ಜಿದಾರನು 2015 ರ ಜನವರಿ 1ನೇ ದಿನಕ್ಕೆ ಮೊದಲು ವಾಸದ ಮನೆಯನ್ನು ನಿರ್ಮಿಸಿರುವುದಕ್ಕಾಗಿ ರುಜುವಾತನ್ನು ಸಲ್ಲಿಸತಕ್ಕದ್ದು.<br>2. ವಾಸದ ಮನೆ ಇಲ್ಲದ ಯಾವುದೇ ಖಾಲಿ ಭೂಮಿಯನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.<br>3. ಅವನ ಕುಟುಂಬದ ಯಾವನೇ ಸದಸ್ಯನು ಯಾವುದೇ ಕಟ್ಟಡ ಅಥವಾ ನಿವೇಶನವನ್ನು ಹೊಂದಿದ್ದರೆ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ.<br>4. ತನ್ನ ಹೆಸರಿನಲ್ಲಾಗಲಿ ಅಥವಾ ತನ್ನ ಕುಟುಂಬದ ಯಾವನೇ ಸದಸ್ಯನ ಹೆಸರಿನಲ್ಲಾಗಲೀ ಒಂದಕ್ಕಿಂತ ಹೆಚ್ಚಿನ ವಾಸದ ಮನೆಗಾಗಿ ಭೂಮಿಯ ಮಂಜೂರಾತಿಗಾಗಿ ಅರ್ಹನಾಗಿರತಕ್ಕದ್ದಲ್ಲ.<br>ಅಲ್ಲದೇ, ಈ ಕೆಳಗಿನಂತೆ ಪ್ರದೇಶದಲ್ಲಿ ವಾಸದ ಮನೆಯನ್ನು ನಿರ್ಮಿಸಿದ್ದಲ್ಲಿ ಸಕ್ರಮಕ್ಕೆ ಅವಕಾಶ ವಿರುವುದಿಲ್ಲ:-<br>1. ಅಧಿಭೋಗದ ಭೂಮಿಯಲ್ಲಿ ವಾಸದಮನೆ ನಿರ್ಮಾಣವಾಗಿದ್ದರೆ;<br>2. ನೈಸರ್ಗಿಕ ನೀರುಗಾಲುವೆಗಳು/ಸ್ಥಳೀಯ ಪ್ರಾಧಿಕಾರದ ಮಾಲೀಕತ್ವದಲ್ಲಿದ್ದಾಗ/ಅರಣ್ಯ |

| | | |
|---|---|---|
| | | ಭೂಮಿಯಾಗಿದ್ದಾಗ/ರಸ್ತೆಗಳ ಅಗಲೀಕರಣಕ್ಕೆ ಪ್ರಸ್ತಾಪಿಸಲಾದ ಭೂಮಿಯಾಗಿದ್ದಾಗ/ಮತ್ತಿತರ ನಾಗರೀಕ ಸೌಲಭ್ಯಗಳು ಅಥವಾ ಸಾರ್ವಜನಿಕ ಸೌಲಭ್ಯಗಳಿಗೆ ಅಡ್ಡಲಾಗಿ ಬರುತ್ತಿದ್ದಾಗ;<br>3. ನದಿಯ ಪಾತ್ರಗಳು ಅಥವಾ ನದಿತಳಗಳು ಹಾಗೂ ಕಾಲುವೆಗಳಿಗೆ ಒತ್ತಿಕೊಂಡಿದ್ದಾಗ ಅಥವಾ ಹೈಟೆನ್ಷನ್ ವಿದ್ಯುತ್ ಲೈನುಗಳ ಅಡಿಯಲ್ಲಿ ಬರುತ್ತಿದ್ದಾಗ/ನಾಗರೀಕ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಮೀಸಲಿರಿಸಿದ್ದಾಗ/ಬೇರೊಬ್ಬ ವ್ಯಕ್ತಿಗೆ ಸೇರಿದ್ದು ಅರ್ಜಿದಾರನು ಅದರ ಮೇಲೆ ಯಾವುದೇ ಹಕ್ಕನ್ನು ಹೊಂದಿರದಿದ್ದಾಗ/ಇತ್ಯಾದಿ ಕಾರಣಗಳಿಂದಾಗಿ ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ. |
| (ಇ) | ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ಹಾಗೂ ಬಾಕಿ ಇರಲು ಕಾರಣಗಳೇನು; (ವಿವರ ಒದಗಿಸುವುದು) | ಚಿಕ್ಕಮಗಳೂರು ಜಿಲ್ಲೆಯಲ್ಲಿ 94-ಸಿ ರಡಿ 9928 ಹಾಗೂ 94-ಸಿಸಿ ರಡಿ 722 ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಇರುತ್ತವೆ.<br><br>ಚಿಕ್ಕಮಗಳೂರು ಜಿಲ್ಲೆಯಲ್ಲಿನ ಬಹುತೇಕ ಸರ್ಕಾರಿ ಜಮೀನುಗಳ ಪೈಕಿ ಭಾಗಶಃ ಅರಣ್ಯ/ಗೋಮಾಳ, ಗೋಮಾಳ/ಸೊಪ್ಪಿನಬೆಟ್ಟ, ಹುಲ್ಲು ಬನ್ನಿ, ಇತ್ಯಾದಿ ವರ್ಗದ ಜಮೀನುಗಳಿವೆ. ಈ ಜಮೀನಿನ ಪೈಕಿ ಕೆಲವು ಜಮೀನುಗಳು ಡೀಮ್ಡ್‌ಫಾರೆಸ್ಟ್‌ಗೆ ವರ್ಗಾವಣೆಯಾಗಿದ್ದು, ಈ ಜಮೀನುಗಳ ಗಡಿ ಗುರುತಿಸುವ ಕಾರ್ಯ ಪ್ರಗತಿಯಲ್ಲಿರುವುದರಿಂದ ಹಾಗೂ ಕೆಲವು ಪ್ರಕರಣಗಳಲ್ಲಿ ಅರಣ್ಯ ಇಲಾಖೆ ಅಭಿಪ್ರಾಯ ಪಡೆಯಬೇಕಿರುವುದರಿಂದ ವಿಲೇವಾರಿ ಮಾಡಲು ಬಾಕಿ ಇರುತ್ತದೆ. |
| (ಈ) | ಬಾಕಿ ಇರುವ ಅರ್ಜಿಗಳನ್ನು ಯಾವ ಕಾಲಮಿತಿಯಲ್ಲಿ ಇತ್ಯರ್ಥಪಡಿಸಿ ಹಕ್ಕುಪತ್ರ ವಿತರಿಸಲಾಗುವುದು? | ಕರ್ನಾಟಕ ಭೂಕಂದಾಯ ಕಾಯ್ದೆ, 1964ರ ಕಲಂ 94ಸಿ ಮತ್ತು 94-ಸಿಸಿ ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ಅಧ್ಯಾಯ XIII-ಸಿ ರನ್ವಯ ನಿಯಮಾನುಸಾರ ಪರಿಶೀಲಿಸಿ ಬಾಕಿ ಇರುವ ಅರ್ಜಿಗಳನ್ನು ಇತ್ಯರ್ಥಪಡಿಸಿ ಹಕ್ಕುಪತ್ರ ವಿತರಿಸಲು ಕ್ರಮವಹಿಸಲಾಗುತ್ತಿದೆ. |

(ಕಡತ ಸಂಖ್ಯೆ:ಆರ್‌ಡಿ 43 ಎಲ್‌ಜಿಯು 2024)

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು